ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ ಜೆ ಎಂ ರವರ ನ್ಯಾಯಾಲಯ,
ಚಿಕ್ಕಮಗಳೂರು.

ಸಿ.ಸಿ.285/2020

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಸಜೀಲಾ | ಪಿ.ಡಬ್ಲ್ಯೂ. 1 |
| ಗಂಡನ ಹೆಸರು | ಃ | ಆಬಿದ್ ಅಹಮದ್ | ಸಿ. ಡಬ್ಲ್ಯೂ. 1 |
| ವಯಸ್ಸು | ಃ | 43 ವರ್ಷ | |
| ವೃತ್ತಿ | ಃ | ಶಿಕ್ಷಕಿ | |
| ವಾಸ | ಃ | ಚಿಕ್ಕಮಗಳೂರು | |

ದಿನಾಂಕಃ 05-07-2022 ರಂದು ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-

ನಾನು ಆರೋಪಿತರನ್ನು ನೋಡಿರುತ್ತೇನೆ. ನನ್ನ ತಂದೆಯ ಹೆಸರು ಅಬ್ದುಲ್ ರಶೀದ್. ತಾಯಿಯ ಹೆಸರು ದಿಲ್ಶಾದ್. ಗ್ರಾಮಪಂಚಾಯಿತಿಯವರು ನನ್ನ ತಾಯಿಗೆ ಒಂದು ಸೈಟನ್ನು ಕೊಟ್ಟಿದ್ದರು. ಆ ಸೈಟಿನ ನಂ.76 ಇದ್ದು , ಈಗ ಅದರ ನಂ.88 ಆಗಿರುತ್ತದೆ. ಇದರ ಸರ್ವೆ ನಂ.115 ಆಗಿರುತ್ತದೆ. ನಮ್ಮ ತಂದೆ 1989 ರಲ್ಲಿ ತೀರಿಕೊಂಡಿರುತ್ತಾರೆ. 2 ವರ್ಷಗಳ ನಂತರ ನನ್ನ ತಾಯಿಯೂ ಸಹಾ ತೀರಿಕೊಂಡಿರುತ್ತಾರೆ. 2010 ರಲ್ಲಿ ನನಗೆ ಕೆಲಸ ಸಿಕ್ಕಿರುತ್ತದೆ. ನಂತರ ನಾನು ಉದ್ಯೋಗಕ್ಕಾಗಿ ಹಾಸನ ಜಿಲ್ಲೆಗೆ ಹೋಗಿರುತ್ತೇನೆ. ನಂತರ ಗ್ರಾಮ ಪಂಚಾಯಿತಿಯಿಂದ ಸೈಟನ್ನು ಸ್ವಚ್ಛ ಮಾಡಿಸಬೇಕೆಂದು ನನಗೆ ನೋಟೀಸು ಬಂದಿರುತ್ತದೆ, ನಂತರ ನಾನು ಸೈಟನ್ನು ಸ್ವಚ್ಛ ಮಾಡಿಸಿರುತ್ತೇನೆ. ತಾಯಿಯ ಹೆಸರಿನಿಂದ ನಿಮ್ಮ ಹೆಸರಿಗೆ ಸೈಟನ್ನು ಮಾಡಿಸಿಕೊಳ್ಳಿ ಎಂದು ಗ್ರಾಮ ಪಂಚಾಯಿತಿಯವರು ಹೇಳಿರುತ್ತಾರೆ. 2016 ರಲ್ಲಿ ನಾನು ತಂದೆ ಮತ್ತು ತಾಯಿಯ ಮರಣ ಪ್ರಮಾಣಪತ್ರವನ್ನು ಪಡೆದುಕೊಂಡು ಶಾಲಾ ದಾಖಲಾತಿಗಳ ಜೊತೆ ಗ್ರಾಮ ಪಂಚಾಯಿತಿಗೆ ಕೊಟ್ಟಿರುತ್ತೇನೆ, ಗ್ರಾಮ ಪಂಚಾಯಿತಿಯವರು ಪರಿಶೀಲಿಸಿ, ನಿಮ್ಮ ಹೆಸರಿಗೆ ನಿವೇಶನವನ್ನು ಮಾಡಿಸಿಕೊಡುತ್ತೇವೆ ಎಂದು ಹೇಳಿರುತ್ತಾರೆ. ಸ್ವಲ್ಪ ದಿನಗಳ ಕಾಲ ನನಗೆ ಗ್ರಾಮ ಪಂಚಾಯಿತಿಗೆ ಹೋಗಲು ಆಗಿರಲಿಲ್ಲ.

ಸ್ವಲ್ಪ ದಿನಗಳ ನಂತರ ಹೋಗಿ ಕೇಳಿದಾಗ ಆರೋಪಿತರು ಅಬ್ದುಲ್ ಬಶೀರ್ ಸಾಬ್ ಯಾನೆ ಅಬ್ದುಲ್ ರಶೀದ್ ಎಂಬ ಹೆಸರಿಗೆ ಆರೋಪಿಯು ಖಾತೆಯನ್ನು ಮಾಡಿಸಿಕೊಂಡಿರುತ್ತಾನೆ. ನಂತರ ತನ್ನ ಹೆಸರನ್ನು ರೇಷನ್ ಕಾರ್ಡಿನಲ್ಲಿಯೂ ಸಹಾ

C.C.No.
PW- CW-

ಅಬ್ದುಲ್ ಬಶೀರ್ ಸಾಬ್ ಎಂದು ಬದಲಾಯಿಸಿಕೊಂಡಿರುತ್ತಾರೆ. ಆದರೆ ಆತನ ಮಕ್ಕಳ ಶಾಲಾ ದಾಖಲಾತಿಗಳಲ್ಲಿ ಅಬ್ದುಲ್ ಬಶೀರ್ ಎಂದು ಇರುತ್ತದೆ. ನಾವು ಈ ಬಗ್ಗೆ ಕೇಳಿದಾಗ ಇದು ನಮ್ಮ ನಿವೇಶನ ಎಂದು ಅವರು ಹೇಳಿರುತ್ತಾರೆ. ಈ ಬಗ್ಗೆ ನಾನು ಪೋಲೀಸರಿಗೆ ದೂರು ಕೊಟ್ಟಿರುತ್ತೇನೆ, ಆದರೆ ಪೋಲೀಸರು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಆರೋಪಿತರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಞಃಎಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.